ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

## ದಿನಾಂಕ: 05, 06 & 07-03-2026 ರಂದು

## ಕೊಡಗಿನ ಕುಶಾಲನಗರದ ಬಳಿಯ

## ಹಾರಂಗಿ ಡ್ಯಾಮ್ ನ ಹಿನ್ನೀರಿನ ದಡದಲ್ಲಿರುವ

## ಪ್ರಕೃತ್ ಹೋಂ ಸ್ಟೇ ಮತ್ತು ರೆಸಾರ್ಟ್ ಪ್ರವಾಸದ

## ಸಚಿತ್ರಗಳ ಪಕ್ಷಿ ನೋಟ










ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಸಮಾನ ಮನಸ್ಕರ ಆಶಯದಂತೆ ದಿನಾಂಕ: 05, 06 & 07-03-2026 ರಂದು ಮೂರು ದಿನಗಳ ಪ್ರವಾಸವನ್ನು ಕೊಡಗಿನ ಕುಶಾಲನಗರದ ಬಳಿಯ ಹಾರಂಗಿ ಡ್ಯಾಮ್ ನ ಹಿನ್ನೀರಿನ ದಡದಲ್ಲಿರುವ ಪ್ರಕೃತ್ ಹೋಂ ಸ್ಟೇ ಮತ್ತು ರೆಸಾರ್ಟ್ ನಲ್ಲಿ ಉಳಿದುಕೊಂಡು, ಅದರ ಸುತ್ತ – ಮುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಣೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅದರಂತೆ, ದಿನಾಂಕ: ದಿನಾಂಕ: 05-03-2026 ರಂದು ಗುರುವಾರ ಮುಂಜಾನೆ, ಸಂಘದಲ್ಲಿ, ಬೆಳಗಿನ ಬನ್ ಹಾಗೂ ಟೀ/ಕಾಫೀ ಸ್ವೀಕರಿಸಿದ ನಂತರ ಬಸ್ ಪ್ರಯಾಣ ಮುಂದುವರಿಸಲಾಯಿತು.





ಬೆಳಿಗ್ಗೆ ಸುಮಾರು 08–45 ಗಂಟೆಗೆ ಚನ್ನಪಟ್ಟಣ – ಮದ್ದೂರು ನಡುವೆ ಇರುವ ಪ್ರತಿಷ್ಠಿತ ಶಿವಳ್ಳಿ ರೆಸ್ಟೋರೆಂಟ್ ನಲ್ಲಿ ಬೆಳಗಿನ ಉಪಹಾರ ಸೇವಿಸಲಾಯಿತು.
























ಪ್ರಯಾಣ ಮುಂದುವರಿಸಿ.... ಸುಮಾರು ೧೧-೪೫ ಗಂಟೆಗೆ ಇಲವಾಲ – ಹುಣಸೂರು ನಡುವೆ ಇರುವ ಕೃಷ್ಣ ಕೆಫೆಯಲ್ಲಿ






ಶೌಚ ಹಾಗೂ ಕಾಫಿ/ಚಹಾ ವಿರಾಮದ ನಂತರ ಪ್ರಯಾಣ ಮುಂದುವರಿಸಲಾಯಿತು...

ಅನಂತರ, ಕುಶಾಲನಗರದ ಬಳಿಯಿರುವ ಬೌದ್ಧರ ಗೋಲ್ಡನ್ ಟೆಂಪಲ್ ಗೆ ಭೇಟಿ ನೀಡಿ, ವೀಕ್ಷಣೆ ಮಾಡಲಾಯಿತು.


























ಗೋಲ್ಡನ್ ಟೆಂಪಲ್ ವೀಕ್ಷಣೆ ನಂತರ ನಮ್ಮ ಗಮ್ಯ ಸ್ಥಳವಾದ ಪ್ರಕೃತ್ ಬ್ಯಾಕ್ ವಾಟರ್ ಹೋಂ ಸ್ಟೇ ಮತ್ತು ರೆಸಾರ್ಟ್ ಗೆ ತಲುಪಿ ಮಧ್ಯಾಹ್ನದ ಭೋಜನ ಮುಗಿಸಿದೆವು.







ಪ್ರಕೃತ್ ಬ್ಯಾಕ್ ವಾಟರ್ ಹೋಂ ಸ್ಟೇ ಮತ್ತು ರೆಸಾರ್ಟ್ ಹಾರಂಗಿ ಡ್ಯಾಂ ನ ಹಿನ್ನೀರಿನ ದಡದಲ್ಲಿದೆ.



ವಿರಾಮದ ನಂತರ ಟೀ/ಕಾಫೀ,

ಅನಂತರ ರಾತ್ರಿ ಭೋಜನದ ತಯಾರಿ, ಅದೂ T20 ವರ್ಲ್ಡ್ ಕಪ್ ಕ್ರಿಕೆಟ್ ಮ್ಯಾಚ್ ಫೈನಲ್ ನ್ನು ಟಿವಿ ಯಲ್ಲಿ ನೋಡಿಕೊಂಡು ರಾತ್ರಿ ಭೋಜನವನ್ನು ಸವಿದು ಆನಂದಿಸಲಾಯಿತು.












ನಮ್ಮ ಸಂಘದ ಹಿರಿಯ ಸದಸ್ಯರಾದ ಶ್ರೀ ಬಿ.ಎ. ಪೂಣಚ್ಚ, ಡಿ.ಸಿ.ಪಿ. (ನಿವೃತ್ತ) ರವರು ಎಲ್ಲರಿಗೂ ಬೆಳಗಿನ ಉಪಹಾರವನ್ನು ಮಡಿಕೇರಿಯ ಮಯೂರ ವ್ಯಾಲಿ ವ್ಯೂ ರೆಸ್ಟೋರೆಂಟ್ (ಕೆ.ಎಸ್.ಟಿ.ಡಿ.ಸಿ. ಸ್ವಾಮ್ಯಕ್ಕೆ ಒಳಪಟ್ಟಿದ್ದು) ನಲ್ಲಿ ಆಯೋಜಿಸಿದ್ದು, ಎಲ್ಲರೂ ರೆಸಾರ್ಟ್ ನಿಂದ ಹೊರಟೆವು.









ಬೆಳಗಿನ ಉಪಹಾರಕ್ಕೆ ಎಲ್ಲರೂ ಮಡಿಕೇರಿಯ ಮಯೂರ ವ್ಯಾಲಿ ವ್ಯೂ ರೆಸ್ಟೋರೆಂಟ್ ತಲುಪಿದೆವು.



ಎಲ್ಲರೂ ಮಡಿಕೇರಿಯ ಮಯೂರ ವ್ಯಾಲಿ ವ್ಯೂ ರೆಸ್ಟೋರೆಂಟ್ ನಲ್ಲಿ ಬೆಳಗಿನ ಉಪಹಾರ ಸೇವಿಸಿದೆವು...













ಎಲ್ಲರೂ ಮಡಿಕೇರಿಯ ಮಯೂರ ವ್ಯಾಲಿ ವ್ಯೂ ರೆಸ್ಟೋರೆಂಟ್ ನಲ್ಲಿ ಬೆಳಗಿನ ಉಪಹಾರ ಸೇವಿಸಿದ ನಂತರ, ನಮಗಾಗಿ ಉಪಹಾರ ಆಯೋಜಿಸಿದ ಶ್ರೀ ಬಿ.ಎ. ಪೂಣಚ್ಚ ರವರಿಗೆ ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ಶಾಲು ಹೊದಿಸಿ, ಮಾಲಾರ್ಪಣೆ ಮಾಡಿ, ಸರಳವಾಗಿ ಗೌರವಿಸಿದರು. ಅವರ ಜೊತೆಗೆ, ಶ್ರೀ ಬೆಳ್ಳಿಯಪ್ಪ, ಎಸ್.ಪಿ. (ನಿವೃತ್ತ) ಮತ್ತು ಶ್ರೀ ಕೆ.ಎಂ. ಮುದ್ದಯ್ಯ, ಎಸ್.ಪಿ. (ನಿವೃತ್ತ) ರವರುಗಳಿಗೂ ಶಾಲು ಹೊದಿಸಿ ಗೌರವಿಸಿಲಾಯಿತು.  ಕೊಡಗಿನ ಈ ಮೂರೂ ಅಧಿಕಾರಿಗಳ ಸೇವೆಯನ್ನು ಸ್ಮರಿಸಿಕೊಳ್ಳಲಾಯಿತು.





ಮಾನ್ಯ ಶ್ರೀ ಬಿ.ಎ. ಪೂಣಚ್ಚ ರವರು ಸೇವೆಯಲ್ಲಿದ್ದಾಗ, ಕೆಲವು ಹಿರಿಯ ಸದಸ್ಯರಿಗೆ ಮಾರ್ಗದರ್ಶಕರಾಗಿದ್ದನ್ನು ನೆನಪಿಸಿಕೊಳ್ಳಲಾಯಿತು. ಇದರಲ್ಲಿ ಅಗ್ರ ಗಣ್ಯರಾದ ನಿಕಟಪೂರ್ವ ಅಧ್ಯಕ್ಷರಾದ, ಶ್ರೀ ಬಿ.ಕೆ. ಶಿವರಾಮ್ ರವರು ತಮ್ಮ ನಮನ ಸಲ್ಲಿಸಿದರು.















ಈ ಹಿರಿಯರ ಸಮ್ಮಿಲ್ಲನ ಹಾಗೂ ಪ್ರವಾಸದ ರೂವಾರಿಯವರು, ಸಂಘದ ಅಧ್ಯಕ್ಷರೂ ಆದ ಶ್ರೀ ಕೆ.ಬಿ. ಬೆಟ್ಟೇಗೌಡ ರವರನ್ನೂ ಸಹ ಈ ಸಂದರ್ಭದಲ್ಲಿ ಶಾಲು ಹೊದಿಸಿ ಗೌರವಿಸಲಾಯಿತು.









ಇನ್ನು ಎಲ್ಲ ಸಭೆ, ಸಮಾರಂಭಗಳೂ ಸೇರಿದಂತೆ ಈ ಪ್ರವಾಸದಲ್ಲಿ ಎಲ್ಲರಿಗೂ ಪಾನೀಯ, ಉಪಹಾರ, ಭೋಜನಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಎಲ್ಲರ ಮನಸ್ಸಂತೋಷ ಪಡಿಸುತ್ತಿರುವ ಸಂಘದ ನಿಕಟಪೂರ್ವ ಖಜಾಂಚಿಯವರಾದ ಶ್ರೀ ಕೆ.ಹೆಚ್. ಜಗದೀಶ್ ರವರನ್ನೂ ಸಹ ಶಾಲು ಹೊದಿಸಿ ಗೌರವಿಸಲಾಯಿತು.



ಎಲ್ಲರನ್ನೂ ಗೌರವಿಸಲು ಕಾರಣಕರ್ತರಾದ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಬಿ. ಕೆ. ಶಿವರಾಮ್ ರವರನ್ನು ಗೌರವಿಸದೇ ಇದ್ರೆ ಹೇಗೆ..!? ಅವರನ್ನೂ ಸಹ ಹಿರಿಯರೆಲ್ಲ ಸರಳವಾಗಿ ಗೌರವಿಸಿದ ಕ್ಷಣ.











ಮಡಿಕೇರಿಯ ಮಯೂರ ವ್ಯಾಲಿ ವ್ಯೂ ರೆಸ್ಟೋರೆಂಟ್ ನಲ್ಲಿ ಬೆಳಗಿನ ಉಪಹಾರ ಸೇವಿಸಿದ ನಂತರ ಸುಮಾರು ೨೦೦ ಮೀಟರ್ ದೂರವಿರುವ ರಾಜಾ ಸೀಟ್ ಕಡೆಗೆ ಕಾಲ್ನಡಿಗೆಯಲ್ಲಿ ನಡೆದಾಗ... ಹಿರಿಯರ ಜೊತೆ ಒಂದು ಪೋಸು.




ಅಂತೂ ರಾಜಾ ಸೀಟ್ ತಲುಪಿದೆವು.






ಮಡಿಕೇರಿಯಾ ರಾಜಾ ಸೀಟ್ ಬಳಿ ಅಧ್ಯಕ್ಷರೂ ಸಹ ಸ್ಮೈಲ್ ಪ್ಲೀಸ್ ಅಂತ ಹೇಳ್ತಾ ಹಿರಿಯರ ಫೋಟೋ ಕ್ಲಿಕ್ಕಿಸುತ್ತಿರುವುದು.








**ಮಾನ್ಯ ಶ್ರೀ ಬಿ.ಎ. ಪೂಣಚ್ಚ ರವರು ಮಡಿಕೇರಿಯಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಹಟ್ಟಿಹೊಳೆ ಜಲಪಾತದೆಡೆಗೆ ನಮ್ಮನ್ನೆಲ್ಲ ಕರೆದೊಯ್ದರು. ಎಲ್ಲರೂ ಹಟ್ಟಿಹೊಳೆ ಜಲಪಾತ ತಲುಪಿದೆವು. ಜಲಪಾತದ ಬಳಿಯ ಕೆಲವು ಫೋಟೋಗಳು..**




















**ಹಟ್ಟಿಹೊಳೆ ಜಲಪಾತದ ಬಳಿ ಶ್ರೀಯುತ ಪೂಣಚ್ಚ ಸಾಹೇಬರು ಎಲ್ಲರಿಗೂ ಕೊಡಗಿನ ಗ್ರಾಮೀಣ ಶೈಲಿಯ ಈರುಳ್ಳಿ ಪಕೋಡ/ಮಿರ್ಚಿ ಬಜ್ಜಿ ಹಾಗೂ ಬೆಲ್ಲದ ಕಾಫಿ/ಟೀ ಆಯೋಜನೆ ಮಾಡಿದರು.**
























ಹಟ್ಟಿಹೊಳೆ ಜಲಪಾತದ ಬಳಿಯಿಂದ ಶ್ರೀ ಪೂಣಚ್ಚ ರವರು ಇಲ್ಲಿಂದ ಸುಮಾರು 2 – 3 ಕಿ.ಮೀ. ದೂರದಲ್ಲಿರುವ ಅವರ ಮನೆಗೆ ನಮ್ಮನ್ನೆಲ್ಲ ಕರೆದೊಯ್ದು, ನಮಗೆಲ್ಲ ಒಣ ಹಣ್ಣುಗಳು (ಡ್ರೈಫ್ರೂಟ್ಸ್) ನೀಡಿ ಸತ್ಕರಿಸಿದರು.


















ಶ್ರೀ ಪೂಣಚ್ಚ ರವರ ಮನೆಯಿಂದ ಸುಮಾರು 2 ಕಿ.ಮೀ. ದೂರದಲ್ಲಿರುವ ಮಾದಾಪುರ ಕ್ಲಬ್ ಗೆ ಮಧ್ಯಾಹ್ನದ ಭೋಜನಕ್ಕೆ ಕರೆದೊಯ್ದರು.





























ಮಾದಾಪುರ ಕ್ಲಬ್ ನಲ್ಲಿ ಭೋಜನ ಸೇವಿಸಿದ ನಂತರ ಶ್ರೀಯುತ ಬಿ.ಎ. ಪೂಣಚ್ಚ ರವರಿಂದ ಬೀಳ್ಕೊಂಡು, ಅಲ್ಲಿಂದ ಹಾರಂಗಿ ಡ್ಯಾಂ ಕಡೆಗೆ ಪ್ರಯಾಣ ಬೆಳೆಸಿದೆವು.








ಹಾರಂಗಿ ಡ್ಯಾಂ ನ ಈ ಗೇಟಿನಿಂದ ವಾಹನ ನಿಶೇಧ ಇದ್ದುದರಿಂದ ಸುಮಾರು 1 ಕಿ.ಮೀ. ನಡಿಗೆಯಲ್ಲೇ ಹಾರಂಗಿ ಡ್ಯಾಂ ನ ಹಿನ್ನೀರಲ್ಲಿರುವ ಬೋಟ್ ರೈಡ್ ಗೆ ಹೊರಟೆವು.













SHREE DEVI PRASAD





ಹಾರಂಗಿ ಹಿನ್ನೀರಿನಲ್ಲಿರುವ ಪಳಗಿಸುತ್ತಿರುವ ಆನೆಗಳ ಜೊತೆ ಫೋಟೋಗಳು.



ನಮ್ಮ ಪ್ರವಾಸದ ಕೊನೆಯ ದಿನ. ಬೆಳಗಿನ ಉಪಹಾರವನ್ನು ರೆಸಾರ್ಟಿನಲ್ಲಿ ಮುಗಿಸಿಕೊಂಡು, ದುಬಾರೆ ಆನೆ ಕ್ಯಾಂಪ್ ಕಡೆಗೆ ಪ್ರಯಾಣ ಮುಂದುವರಿಸಿದೆವು.






















COORG
INDIA
EUPHORIA


COORG
INDIA
EUPHORIA










ದುಬಾರೆ ಬಳಿ ಇದ್ದ ವ್ಯಾಕ್ಸ್ ಮ್ಯೂಸಿಯಂ ಗೆ ಭೇಟಿ ನೀಡಿದೆವು.




HORROR
WORLD


COORG
INDIA
EUPHORIA


VR GAMES
WAX
MUSEUM















ದುಬಾರೆಯಿಂದ ನಮ್ಮ ಮರು ಪ್ರಯಾಣ ಮುಂದುವರಿಯಿತು. ಮಾರ್ಗ ಮಧ್ಯೆಯಲ್ಲಿ ಅಂದರೆ, ಇಲವಾಲ ಬಳಿಯಿರುವ ಕೋಕೊ ಗ್ರೂವ್ ನಲ್ಲಿ ಮಧ್ಯಾಹ್ನದ ಭೋಜನ ಮುಗಿಸಿದೆವು.








ಮಧ್ಯಾಹ್ನದ ಭೋಜನದ ನಂತರ ಬೆಂಗಳೂರು ಕಡೆಗೆ ಮರು ಪ್ರಯಾಣ ಮುಂದುವರಿಯಿತು.



ಮದ್ದೂರು ಮತ್ತು ಚನ್ನಪಟ್ಟಣದ ಮಾರ್ಗ ಮಧ್ಯೆಯಲ್ಲಿರುವ ಶಿವಳ್ಳಿ ಚೌಕಿ ಹೋಟೆಲ್ ನಲ್ಲಿ ಸಂಜೆಯ ಟೀ/ಕಾಫೀ. ಶೌಚ ಮುಗಿಸಿ ಬೆಂಗಳೂರು ಕಡೆ ಪ್ರಯಾಣ ಮುಂದುವರಿಯಿತು.










ರಾತ್ರಿ ಸುಮಾರು 8 ಗಂಟೆಗೆ ಸುರಕ್ಷಿತವಾಗಿ ಬೆಂಗಳೂರು ತಲುಪಿರುತ್ತೇವೆ. ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

NAMASTE

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

* * * * *